QP CODE: 30238

ದ್ವಿತೀಯ ಸೆಮಿಸ್ಟರ್ ಬಿ.ಎ. ಪದವಿ ಪರೀಕ್ಷೆ, ಮೇ / ಜೂನ್, 2026

(ಎನ್‌ಇಪಿ ಸ್ಕೀಂ)

ಕನ್ನಡ ಐಚ್ಛಿಕ ಪತ್ರಿಕೆ - 3

(NAB 0380) ಅನಿಕೇತನ - 2 (ಘಟಕ - 3)

ಆಧುನಿಕ ಪೂರ್ವ ಕನ್ನಡ ಸಾಹಿತ್ಯ ಚರಿತ್ರೆ - 3

ಅವಧಿ : 2 ಗಂಟೆಗಳು

ಗರಿಷ್ಠ ಅಂಕಗಳು : 60

ವಿದ್ಯಾರ್ಥಿಗಳಿಗೆ ಸೂಚನೆಗಳು:

1. ವಿದ್ಯಾರ್ಥಿಯು ವಿಭಾಗ ಸಂಖ್ಯೆ ಹಾಗೂ ಪ್ರಶ್ನೆ ಸಂಖ್ಯೆಗಳನ್ನು ಸ್ಪಷ್ಟವಾಗಿ ಮಾರ್ಜಿನ್ ಗೆರೆಯ ಒಳಗೆ ಬರೆಯಬೇಕು.
2. ವಿಭಾಗ ಸಂಖ್ಯೆ ಹಾಗೂ ಪ್ರಶ್ನೆ ಸಂಖ್ಯೆಗಳನ್ನು ನಮೂದಿಸದೇ ಇರುವ ಉತ್ತರಗಳನ್ನು ಮೌಲ್ಯಮಾಪನ ಮಾಡಲಾಗುವುದಿಲ್ಲ.
3. ವಿಭಾಗ - I ರಲ್ಲಿನ ಬಹು ಆಯ್ಕೆಯ ಪ್ರಶ್ನೆಗಳಿಗೆ ಉತ್ತರವನ್ನು ಉತ್ತರ ಪತ್ರಿಕೆಯ ಮೊದಲ ಪುಟದಲ್ಲಿ ಬರೆಯಬೇಕು ಹಾಗೂ ಅದೇ ಪ್ರಶ್ನೆಗಳಿಗೆ ಉತ್ತರವನ್ನು ಪುನರಾವರ್ತಿಸಬಾರದು.
4. ಪ್ರಶ್ನೆ ಪತ್ರಿಕೆಯಲ್ಲಿನ ವಿಭಾಗ - I ರಲ್ಲಿನ ಬಹು ಆಯ್ಕೆಯ ಪ್ರಶ್ನೆಗಳಿಗೆ ನೀಡಲಾದ ಆಯ್ಕೆ ಉತ್ತರಗಳ (Options) ಮೇಲೆ ಯಾವುದೇ ರೀತಿಯ ಗುರುತು ಸೂಚಕ ಚಿಹ್ನೆಗಳಾದ ವೃತ್ತ ಹಾಕುವುದು, ಚುಕ್ಕೆ ಇಡುವುದು, ಸರಿ ಗುರುತು ಮಾಡುವುದು (✓) ಇತ್ಯಾದಿಗಳನ್ನು ಕಟ್ಟುನಿಟ್ಟಾಗಿ ನಿರ್ಬಂಧಿಸಲಾಗಿದೆ. ಪ್ರಶ್ನೆ ಪತ್ರಿಕೆಯ ಮೇಲೆ (ನೋಂದಣಿ ಸಂಖ್ಯೆಯನ್ನು ಹೊರತುಪಡಿಸಿ) ಬೇರೆ ಯಾವುದೇ ತರಹದ ಬರವಣಿಗೆಗಳನ್ನು ಮಾಡಬಾರದು.

ವಿಭಾಗ - I

I. ಸರಿಯಾದ ಉತ್ತರವನ್ನು ಆಯ್ದು ಬರೆಯಿರಿ. **(10x1=10)**

I-1. ಮುದ್ರಾಮಂಜೂಷ ಕೃತಿಯ ಕರ್ತೃ
(ಅ) ಯಾದವ (ಆ) ಮುಮ್ಮಡಿ ಕೃಷ್ಣರಾಜ ಒಡೆಯರು
(ಇ) ಬಸವಪ್ಪಶಾಸ್ತ್ರಿ (ಈ) ಕೆಂಪುನಾರಾಯಣ

I-2. ಹುತ್ತರಿಯ ಹಾಡು ಕವಿತೆಯ ರಚನಾಕಾರರು
(ಅ) ಕಾಳಿದಾಸ (ಆ) ಎಂ.ಎಸ್. ಪುಟ್ಟಣ್ಣ
(ಇ) ಪಂಜೆ ಮಂಗೇಶರಾಯರು (ಈ) ಎಂ. ವೆಂಕಟಕೃಷ್ಣಯ್ಯ

I-3. ಇಂದಿರಾಬಾಯಿ ಕೃತಿಯ ಕರ್ತೃ
(ಅ) ವೆಂಕಟಾಚಾರ್ಯರು (ಆ) ಗುಲ್ವಾಡಿ ವೆಂಕಟರಾಯರು
(ಇ) ಬೋಳಾರ ಬಾಬುರಾಯರು (ಈ) ಗಳಗನಾಥ

I-4. ಮಿತ್ರಾವಿಂದ ಗೋವಿಂದ ನಾಟಕದ ಕರ್ತೃ
(ಅ) ಆರ್ಯವರ್ಧನ (ಆ) ಸಿಂಗರಾರ್ಯ (ಇ) ಕಾಳಿದಾಸ (ಈ) ಬಸವಪ್ಪಶಾಸ್ತ್ರಿ

I-5. ರೊಕ್ಕ ಪದದ ಅರ್ಥ
(ಅ) ಶಿಸ್ತು (ಆ) ರೊಟ್ಟಿ (ಇ) ಹಣ (ಈ) ಸಹೋದರಿ

I-6. ಮರಾಠಿ ಕಾದಂಬರಿಗಳನ್ನು ಕನ್ನಡಕ್ಕೆ ಅನುವಾದಿಸಿದವರು ಯಾರು?
(ಅ) ಗಳಗನಾಥರು (ಆ) ಬಿ. ವೆಂಕಟಾಚಾರ್ಯ
(ಇ) ಬಸವಪ್ಪಶಾಸ್ತ್ರಿ (ಈ) ಅನಂತನಾರಾಯಣ

I-7. ಸುಕೃತ ಪದದ ಅರ್ಥ
(ಅ) ಪಾಪ (ಆ) ನರಕ (ಇ) ಪುಣ್ಯ (ಈ) ಭೂಮಿ

I-8. ಚಂದ್ರಹಾಸನ ಕಥೆ ಕರ್ತೃ
(ಅ) ಅಕ್ಕಮಹಾದೇವಿ (ಆ) ಗಿರಿಜಾಬಾಯಿ
(ಇ) ಆರ್. ಕಲ್ಯಾಣಮ್ಮ (ಈ) ಹೆಳವನಕಟ್ಟೆ ಗಿರಿಯಮ್ಮ

I-9. ಇಟ್ಟರೆ ಸಗಣಿಯಾದೆ ತಟ್ಟಿದರೆ .....?
(ಅ) ಕರುಳಾದೆ (ಆ) ಪಾಪಿಯಾದೆ (ಇ) ಕುರುಳಾದೆ (ಈ) ಹಸುವಾದೆ

I-10. ವ್ಯಾಯಾಮ ಶಿಕ್ಷಕನಾದ ಕನ್ನಡದ ಪ್ರಸಿದ್ಧ ಕವಿ
(ಅ) ಆರ್.ನರಸಿಂಹಚಾರ್ಯ (ಆ) ಡಿ.ಎಲ್. ನರಸಿಂಹಚಾರ್ಯರು
(ಇ) ಮುದ್ದಣ (ಈ) ಎಂ.ಎನ್.ಪುಟ್ಟಣ್ಣ

ವಿಭಾಗ - II

II. ಐದು ವಿಷಯಗಳಿಗೆ ಟಿಪ್ಪಣಿ ಬರೆಯಿರಿ. **(5x3=15)**

II-1. ಶಿಶುನಾಳ ಶರೀಫ
II-2. ಎನಗೊಬ್ಬ ಮಗ ಹುಟ್ಟಿದನವ್ವಾ
II-3. ಶಾಂತಕವಿ
II-4. ಈ ಧರ್ಮವ್ಯಾಕೊ ಈ ಜಾತಿಯಾಕೊ
II-5. ಮುದ್ದಣ
II-6. ತತ್ವಪದ
II-7. ಬಿ. ವೆಂಕಟಚಾರ್ಯ
II-8. ಕಡಕೋಳ ಮಡಿವಾಳಪ್ಪ

ವಿಭಾಗ - III

III. ಕೆಳಗಿನ ಮೂರು ಪ್ರಶ್ನೆಗಳಿಗೆ ನಿಖರವಾದ ಉತ್ತರ ಬರೆಯಿರಿ. **(3x5=15)**

III-1. ತತ್ವಪದದ ಲಕ್ಷಣಗಳನ್ನು ಬರೆಯಿರಿ.
III-2. ಜೀವನಗೀತ ಕವನದ ಆಶಯ ಬರೆಯಿರಿ.
III-3. ಅನುಭಾವದಡಗಿ ಮಾಡಮ್ಮ ತತ್ವಪದವನ್ನು ವಿಶ್ಲೇಷಿಸಿರಿ?
III-4. ಸೋರುತಿಹುದು ಮನೆಯ ಮಾಳಿಗೆ ತತ್ವಪದವನ್ನು ವಿಮರ್ಶಿಸಿರಿ?
III-5. ಸೀತೆಗೆ ವಾಲ್ಮೀಕಿ ದರ್ಶನ ಪಡೆದ ಸಂದರ್ಭ ಬರೆಯಿರಿ?

ವಿಭಾಗ - IV

IV. ಈ ಕೆಳಗಿನ ಪ್ರಶ್ನೆಗಳಿಗೆ ವಿವರವಾದ ಉತ್ತರ ಬರೆಯಿರಿ. **(2x10=20)**

IV-1. ಆಧುನಿಕ ಪೂರ್ವ ಕನ್ನಡ ಸಾಹಿತ್ಯದ ಸ್ವರೂಪ, ಪ್ರೇರಣೆಗಳನ್ನು ಕುರಿತು ಬರೆಯಿರಿ.

ಅಥವಾ

ಇಗ್ಗಪ್ಪ ಹೆಗ್ಗಡೆಯ ವಿವಾಹ ಪ್ರಹಸನ ನಾಟಕದಲ್ಲಿನ ಸಾಮಾಜಿಕ ಸಮಸ್ಯೆಗಳನ್ನು ಚರ್ಚಿಸಿ.

IV-2. ಆಧುನಿಕ ಕನ್ನಡ ಸಾಹಿತ್ಯದ ರೂಪಗಳು ಯಾವುವು ? ವಿವರಿಸಿ.

ಅಥವಾ

ಚಾಣಕ್ಯ ತನ್ನ ತಂತ್ರಗಾರಿಕೆಯಿಂದ ನಂದರನ್ನು ನಿಗ್ರಹಿಸಿ ಚಂದ್ರಗುಪ್ತನಿಗೆ ನೆರವಾದ ಪ್ರಸಂಗವನ್ನು ಕುರಿತು ಬರೆಯಿರಿ?

* * *